# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1519 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/03/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮೊಬೈಲ್ ಮೆಡಿಕಲ್ ಸೇವೆಯನ್ನು ಯಾವ ಸಂಸ್ಥೆಯವರು ನೀಡುತ್ತಿದ್ದಾರೆ; ಅವರು ಎಷ್ಟು ವಾಹನಗಳನ್ನು ತಮ್ಮ ಸಂಸ್ಥೆಯ ಹೆಸರಿಗೆ ಖರೀದಿಸಿದ್ದಾರೆ; (ವಾಹನವನ್ನು ಖರೀದಿಸಿ ಮೊಬೈಲ್ ಮೆಡಿಕಲ್ ಯುನಿಟ್ ಆಗಿ ಪರಿವರ್ತಿಸಿರುವ ಬಗ್ಗೆ ಎಲ್ಲಾ ದಾಖಲೆಗಳೊಂದಿಗೆ ಸಮಗ್ರ ಮಾಹಿತಿ ನೀಡುವುದು) | ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮೊಬೈಲ್ ಮೆಡಿಕಲ್ ಯುನಿಟ್ ಸೇವೆಯನ್ನು ಈ ಕೆಳಕಂಡ ಸಂಸ್ಥೆಯವರು ನೀಡುತ್ತಿದ್ದಾರೆ.<br>1. ಸ್ಕೋಡ್ ವೇಸ್ (ಸಹ್ಯಾದ್ರಿ ಕಮ್ಯೂನಿಟಿ ಡೆವಲಪ್ ಮೆಂಟ್ & ವುಮೆನ್ ಎಂಪವರ್‌ಮೆಂಟ್ ಸೊಸೈಟಿ).<br>2. ಉದ್ಭವ್ ಎಜುಕೇಷನಲ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ<br>3. ಬ್ಲೋಸಮ್ ಹೆಲ್ತ್ ಅಂಡ್ ಎಜುಕೇಷನಲ್ ಚಾರಿಟೇಬಲ್ ಟ್ರಸ್ಟ್<br>4. ಯುನೈಟೆಡ್ ಸೋಷಿಯಲ್ ವೆಲ್ಫೇರ್ ಅಸೋಶಿಯೇಷನ್ ಆಫ್ ಬೆಳಗಾವಿ.<br><br>2020-21 ಹಾಗೂ 2021-22 ರಲ್ಲಿ ಕಾರ್ಯನಿರ್ವಹಿಸುತ್ತಿರುವ 35 ಸಂಚಾರಿ ಆರೋಗ್ಯ ಘಟಕಗಳ ವಾಹನಗಳಲ್ಲಿ 18 ವಾಹನಗಳನ್ನು ಆಯಾ ಸಂಸ್ಥೆಯವರು ತಮ್ಮ ಹೆಸರಿನಲ್ಲಿ ಖರೀದಿಸಿರುತ್ತಾರೆ. ಸ್ಕೋಡ್ ವೇಸ್ ಸಂಸ್ಥೆಯವರು 17 ವಾಹನಗಳನ್ನು ತಮ್ಮ ಸದಸ್ಯರ ಹೆಸರಿನಲ್ಲಿ ಖರೀದಿಸಿ ನಂತರ ಸಂಸ್ಥೆಯ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ. (ಮಾಹಿತಿಯನ್ನು CD ಯಲ್ಲಿ ಒದಗಿಸಲಾಗಿದೆ) |
| ಆ) | ಮೊಬೈಲ್ ಮೆಡಿಕಲ್ ಯುನಿಟ್ ಟೆಂಡರ್ ನಲ್ಲಿ ದೊಡ್ಡ ಮೊತ್ತದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಅವ್ಯವಹಾರ ನಡೆಸಿ ಬಡ ಕಟ್ಟಡ ಕಾರ್ಮಿಕರ ರೂ.18.55 ಕೋಟಿಗಳ ಅವ್ಯವಹಾರ ನಡೆಸಿರುವಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ಮೊಬೈಲ್ ಮೆಡಿಕಲ್ ಯುನಿಟ್‌ನ ಟೆಂಡರ್ ನಲ್ಲಿ ಇಂತಹ ಯಾವುದೇ ಸ್ವಜನ ಪಕ್ಷಪಾತ ಅಥವಾ ಅವ್ಯವಹಾರ ನಡೆದಿರುವುದಿಲ್ಲ. ಅಲ್ಲದೇ, ರೂ.18.55 ಕೋಟಿಗಳ ಮೊತ್ತಕ್ಕೆ ನಿರ್ದಿಷ್ಟವಾಗಿ ಯಾವುದೇ ಟೆಂಡರ್ ನೀಡಿರುವುದಿಲ್ಲ. |

| | | |
|---|---|---|
| ಇ) | ಮೊಬೈಲ್ ಮೆಡಿಕಲ್ ಯುನಿಟ್‌ಗೆ ಬೇಕಾದ ವಾಹನವನ್ನು ಹೊಂದದೆ ಇರುವ ಸ್ಕೋಡ್ ವೇಸ್ ಸಂಸ್ಥೆಯವರಿಗೆ ಟೆಂಡರ್ ನೀಡಿದ್ದು, ಬೇರೆಯವರ ಹೆಸರ ಟ್ರಾವಲ್ಸ್ ಗೆ ಸಂಬಂಧಿಸಿದ ಸೆಕೆಂಡ್ ಹ್ಯಾಂಡ್ ವಾಹನಗಳ ದಾಖಲೆಗಳನ್ನು ಸಲ್ಲಿಸಿ ಟೆಂಡರ್ ಪಡೆದಿರುವ ಬಗ್ಗೆ ಸರ್ಕಾರದ ನಿಲುವೇನು? | ಸ್ಕೋಡ್ ವೇಸ್ ಸಂಸ್ಥೆಯು 17 ವಾಹನಗಳನ್ನು ಸಂಸ್ಥೆಯ ಸದಸ್ಯರೊಬ್ಬರ ಹೆಸರಿನಲ್ಲಿ ಖರೀದಿ ಮಾಡಿ ತದನಂತರ ಸಂಸ್ಥೆಯ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ.<br><br>ಪ್ರಸ್ತುತ ಎಲ್ಲಾ 35 ವಾಹನಗಳ ಕಾರ್ಯನಿರ್ವಾಹಣಾ ಅವಧಿಯು ಮುಕ್ತಾಯವಾಗಿದ್ದು, ಮಂಡಳಿ ಸಭೆಯ ತೀರ್ಮಾನದನ್ವಯ ವಿಸ್ತರಣಾ ಅವಧಿಯಲ್ಲಿ ಸದರಿ ವಾಹನಗಳು ಕಾರ್ಯನಿರ್ವಹಿಸುತ್ತಿವೆ.<br><br>ಆದುದರಿಂದ ಈ ವಾಹನಗಳನ್ನು ಸಂಸ್ಥೆಗಳಿಂದ ಮಂಡಳಿಯು ಹಿಂಪಡೆಯುತ್ತಿದ್ದು, ಈ ವಾಹನಗಳ ಒಡೆತನವನ್ನು ಮಂಡಳಿಯ ಹೆಸರಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಾಇ 126 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**